ಶಿನ್ ನ ಟ್ರೈಸಿಕಲ್

ತತ್ಸುಹಾರು ಕೋಡಾಮಾ

ಶಿನ್ ನ ಟ್ರೈಸಿಕಲ್

ತತ್ಸುಹಾರು ಕೋಡಾಮಾ



ಈ ಕಥೆಯು ಮಕ್ಕಳ ಮತ್ತು ಯುವಜನರ ಮನಸ್ಸಿನಲ್ಲಿ ಯುದ್ಧದ ಮೇಲಿನ ದ್ವೇಷವನ್ನು ಶಾಶ್ವತವಾಗಿ ಮೂಡಿಸುತ್ತದೆ. ಯುದ್ಧವು ರಾಜಕಾರಣಿಗಳು ಮತ್ತು ಸೇನಾಧಿಪತಿಗಳನ್ನು ಕೊಲ್ಲುವುದಿಲ್ಲ. ಯುದ್ಧದ ಬಲಿಪಶುಗಳು ಮುಗ್ಧ ಮಕ್ಕಳು. ಮೂರು ವರುಷದ ಶಿನ್‌ನಂತಹವರು. ಅಮೆರಿಕಾ ಹಿರೋಷಿಮಾದ ಮೇಲೆ ಬಾಂಬ್ ಹಾಕಿದಾಗ ಪುಟ್ಟ ಶಿನ್ ತನ್ನ ಕೆಂಪು ಟ್ರೈಸಿಕಲ್‌ನಲ್ಲಿ ಸವಾರಿ ಮಾಡುತ್ತ ಆಡುತ್ತಿದ್ದನು. ಈ ಕಥೆಯು ಯುದ್ಧದ ಭೀಕರತೆಯನ್ನು ನಿಮ್ಮಲ್ಲಿ ಶಾಶ್ವತವಾಗಿ ಮೂಡಿಸುತ್ತದೆ ಮತ್ತು ಶಾಂತಿಗಾಗಿ ಕೆಲಸ ಮಾಡಲು ನಿಮ್ಮೆಲ್ಲರನ್ನು ಪ್ರೇರೇಪಿಸುತ್ತದೆ.

ಐವತ್ತು ವರುಷಗಳ ಹಿಂದೆ, ಶಿನ್ ಮೂರು ವರುಷದವನಿದ್ದಾಗ, ಜಪಾನ್‌ನ ಹಿರೋಷಿಮಾ ನಗರದ ಮೂಲಕ ಹರಿಯುತ್ತಿದ್ದ ಶಾಂತವಾದ ನದಿಯ ಸಮೀಪದ ಒಂದು ಸಣ್ಣ ಮನೆಯಲ್ಲಿ ನಮ್ಮ ಕುಟುಂಬ ವಾಸಿಸುತ್ತಿತ್ತು. ಶಿನ್‌ಗೆ ಮಿಚಿಕೊ ಮತ್ತು ಯೋಕೊ ಎಂಬ ಇಬ್ಬರು ಅಕ್ಕಂದಿರು ಇದ್ದರು. ಆದರೆ ಅವನ ಅತ್ಯುತ್ತಮ ಸ್ನೇಹಿತೆ ಕಿಮಿ, ಪಕ್ಕದ ಮನೆಯಲ್ಲಿ ವಾಸಿಸುತ್ತಿದ್ದ ಹುಡುಗಿ. ಪ್ರತಿದಿನ ಅವರು ಆಟ ಆಡುತ್ತಿದ್ದರು. ಚಿತ್ರಗಳ ಪುಸ್ತಕಗಳನ್ನು ನೋಡುತ್ತಿದ್ದರು. ವಿಶೇಷವಾಗಿ ಶಿನ್‌ಗೆ ಅಸಾಧ್ಯವಾದ ಕನಸು ಎಂದು ತಿಳಿದಿದ್ದರೂ ಅವನಿಗೆ ತುಂಬಾ ಬೇಕಾಗಿದ್ದ ಟ್ರೈಸಿಕಲ್‌ನ್ನು ತೋರಿಸುವ ಪುಸ್ತಕವನ್ನು ಅವರು ಓದುತ್ತಿದ್ದರು.

ಪ್ರತಿ ಆಗಸ್ಟ್‌ನಲ್ಲಿ ಅದೇ ನೆನಪು ನನ್ನನ್ನು ಕಾಡುತ್ತದೆ. ನನ್ನ ಮನಸ್ಸಿನಲ್ಲಿ ನನ್ನ ಮಗ ಶಿನ್, ತನ್ನ ಹುಟ್ಟುಹಬ್ಬದ ಉಡುಗೊರೆಯ ಕನಸು ಕಂಡಿದ್ದ ಕೆಂಪು ಟ್ರೈಸಿಕಲ್‌ನ್ನು ಓಡಿಸುತ್ತಿರುವುದು ಕಾಣುತ್ತದೆ. ಆದರೆ ಈ ಸಂತೋಷದ ಚಿತ್ರವು ಹೊಗೆ ಮತ್ತು ಬೂದಿಯ ಮೋಡದ ಹಿಂದೆ ಮಾಯವಾಗುತ್ತದೆ. ನಮ್ಮ ಎಲ್ಲ ಕನಸುಗಳಿಗೆ ಅಂತ್ಯ ತಂದ ಆಗಸ್ಟ್‌ದ ಆ ಒಂದು ದಿನವನ್ನು ನೆನೆಸಿಕೊಂಡಾಗ ನನ್ನ ಹೃದಯದ ಮೇಲೆ ಕತ್ತಲೆ ಆವರಿಸುತ್ತದೆ.

ಒಂದು ದಿನ, ಜಪಾನಿನ ನೌಕಾಪಡೆಯ ನಾವಿಕನಾಗಿದ್ದ ಶಿನ್‌ನ ಚಿಕ್ಕಪ್ಪ ಅವನನ್ನು ಭೇಟಿಯಾಗಲು ಬಂದರು.

"ಶಿನ್, ಇಲ್ಲಿಗೆ ಬಾ. ನಿನಗಾಗಿ ನನ್ನ ಬಳಿ ಏನೋ ಇದೆ." ಎಂದು ಅವರು ಕರೆದರು.

"ಅದು ಏನು ?" ಎಂದು ತನ್ನ ಚಿಕ್ಕಪ್ಪನ ತೋಳುಗಳಲ್ಲಿದ್ದ ಬೃಹತ್ ಪ್ಯಾಕೇಜ್‌ನ್ನು ಕಣ್ಣುಗಳನ್ನು ಅಗಲವಾಗಿ ತೆರೆದು ನೋಡುತ್ತಾ ಶಿನ್ ಉತ್ಸಾಹದಿಂದ ಕೇಳಿದನು.

"ಊಹಿಸು," ಎಂದು ಅವನ ಚಿಕ್ಕಪ್ಪ ಹೇಳಿದರು, "ಅದು ನಿನಗೆ ನಿಜವಾಗಿಯೂ ನಿಜವಾಗಿಯೂ ಬೇಕಾಗಿರುವ ಯಾವುದೋ ಒಂದು ವಸ್ತು." ಅಷ್ಟು ಹೇಳಿ, ಅವನ ಚಿಕ್ಕಪ್ಪ ಉಡುಗೊರೆಯನ್ನು ತನ್ನ ಹಿಂದೆ ಮರೆಮಾಡಿದರು. ಶಿನ್ ಎಷ್ಟು ಉತ್ಸಾಹಗೊಂಡಿದ್ದನೆಂದರೆ ಪ್ಯಾಕೇಜ್‌ನ್ನು ತಲುಪಲು ಅವರ ಸುತ್ತಲೂ ಜಿಗಿಯತೊಡಗಿದನು. ಆದರೆ ಅವನ ಚಿಕ್ಕಪ್ಪ, ಇಡೀ ಸಮಯ ನಗುತ್ತಲೇ, ಆ ರಹಸ್ಯದ ಉಡುಗೊರೆಯನ್ನು ಮರೆಮಾಡಿಕೊಂಡೇ ಇದ್ದರು.

ಅಷ್ಟರಲ್ಲಿ, ಶಿನ್ ಸುತ್ತುವ ಕಾಗದದೊಳಗಿಂದ ಹೊರಚಾಚುತ್ತಿದ್ದ ಒಂದು ಚಿಕ್ಕ ಕೆಂಪು ಹ್ಯಾಂಡಲ್ ನೋಡಿದನು. ತಾನು ನೋಡಿದ್ದನ್ನು ನಂಬಲಾಗದೆ "ಇದು ಟ್ರೈಸಿಕಲ್!" ಎಂದು ಶಿನ್ ಕಿರುಚಿದನು.

ಆದರೆ ಅವನು ಉಳಿದ ಕಾಗದವನ್ನು ಹರಿದು ತೆಗೆಯುತ್ತಿದ್ದಂತೆ ಅವನ ಕಣ್ಣುಗಳು ಕಣ್ಣೀರಿನಿಂದ ತುಂಬಿಕೊಂಡವು. “ಓಹ್, ಧನ್ಯವಾದಗಳು, ಅಂಕಲ್. ತುಂಬಾ ಧನ್ಯವಾದಗಳು. ನಿಮಗೆ ಇದು ಎಲ್ಲಿ ಸಿಕ್ಕಿತು?”

“ನನ್ನ ಕಪಾಟಿನ ಹಿಂಭಾಗದಲ್ಲಿ ಅಡಗಿಸಿಟ್ಟಿದ್ದನ್ನು ನಾನು ನೋಡಿದ್ದೆ,” ಎಂದು ಅವನ ಅಂಕಲ್ ಹೇಳಿದರು. “ನಿನ್ನ ಹುಟ್ಟುಹಬ್ಬಕ್ಕಿಂತ ಮುಂಚೆಯೇ ನಾನು ಹೊರಡಬೇಕಾಗಿರುವುದರಿಂದ ಈಗಲೇ ಇದನ್ನು ನಿನಗೆ ಕೊಡಲು ಬಂದಿದ್ದೇನೆ. ”

ಶಿನ್ ಬೇಗನೆ ಸೈಕಲ್ ಮೇಲೆ ಹತ್ತಿ, ನನ್ನತ್ತ ಹೆಮ್ಮೆಯಿಂದ ನೋಡುತ್ತಾ, “ನೋಡಿ ಪಾಪಾ, ನನ್ನ ಕನಸು ನನಸಾಗಿದೆ,” ಎಂದನು.

೧೯೪೫ರ ಆಗಸ್ಟ್ ೬ರ ಬೆಳಗು ಸುಂದರವಾಗಿತ್ತು. ಹತ್ತಿರದ ಮರಗಳಲ್ಲಿ ಜೀರುಂಡೆಗಳು ತಮ್ಮ ಕಾಲುಗಳನ್ನು ಒಂದಕ್ಕೊಂದು ಉಜ್ಜಿಕೊಳ್ಳುತ್ತಿದ್ದಾಗ ಉಂಟಾಗುತ್ತಿದ್ದ ಮರಳು ಕಾಗದದಂತಹ ಶಬ್ದಗಳಿಂದ ಗಾಳಿ ತುಂಬಿ ಹೋಗಿತ್ತು.

ಆದರೆ ಅಮೆರಿಕದ ಬಾಂಬ್ ದಾಳಿಯ ಎಚ್ಚರಿಕೆ ನೀಡುತ್ತಿರುತ್ತಿದ್ದ ಮತ್ತೊಂದು ಸೈರನ್ ಬೆಳಗಿನ ನಿಃಶಬ್ದತೆಯನ್ನು ಮುರಿದು ಬಿಟ್ಟಿತು. ಸೈರನ್ ನಿಂತಾಗ ಶಿನ್ ಮತ್ತು ಕಿಮಿ ಹಿತ್ತಲಿಗೆ ಓಡಿದರು. ಟ್ರೈಸಿಕಲ್ ಮೇಲೆ ಹತ್ತಿ ಅಂಗಳದ ಸುತ್ತ ಸವಾರಿ ಮಾಡುತ್ತಾ ಕಿಲಕಿಲನೆ ನಗತೊಡಗಿದರು.

ನಮ್ಮ ಮನೆಯ ಮುಂದೆ ರಸ್ತೆಯನ್ನು ದುರಸ್ತಿ ಮಾಡುತ್ತಿದ್ದ ಸೈನಿಕರ ಗುಂಪೊಂದು, ಶಿನ್ ಮತ್ತು ಕಿಮಿ ದೀಪಗಳಂತೆ ಹೊಳೆಯುತ್ತಾ ಕೆಂಪು ಟ್ರೈಸಿಕಲ್‌ನಲ್ಲಿ ವೇಗವಾಗಿ ಹಾದುಹೋಗುವುದನ್ನು ನೋಡಿ ನಕ್ಕರು. ನಾನು ಕೂಡ ನಗುತ್ತಾ ಕೆಲಸಕ್ಕೆ ಸಿದ್ಧವಾಗಲು ನಮ್ಮ ಮನೆಗೆ ಹಿಂತಿರುಗಿದೆ. ಮತ್ತು ನಂತರ ಊಹಿಸಲೂ ಅಸಾಧ್ಯವಾದದ್ದು ಸಂಭವಿಸಿತು.

ಅಷ್ಟು ಭೀಕರವಾದ ಸ್ಫೋಟ, ಅಷ್ಟು ಕಣ್ಣು ಕುಕ್ಕುವಷ್ಟು ಪ್ರಕಾಶಮಾನವಾದ ಹೊಳಪು. ಜಗತ್ತು ಕೊನೆಗೊಂಡಿತೆಂದು ನಾನು ಭಾವಿಸಿದೆ. ನಂತರ, ಅಷ್ಟೇ ವೇಗದಿಂದ ಎಲ್ಲಕಡೆಗೂ ಕತ್ತಲು ಕವಿಯಿತು.

ನನಗೆ ಎಚ್ಚರವಾದಾಗ, ಕತ್ತಲೆ ನನ್ನನ್ನು ಸುತ್ತುವರಿದಿತ್ತು. ನನಗೆ ಚಲಿಸಲು ಸಾಧ್ಯವಾಗಲಿಲ್ಲ. ನಾನು ಸಿಕ್ಕಿಹಾಕಿಕೊಂಡಿದ್ದೆ. –

ಆದರೆ ಎಲ್ಲಿ ?

ನಂತರ ನನ್ನ ಮೇಲಿದ್ದ ಒಂದು ಸಣ್ಣ ರಂಧ್ರದ ಮೂಲಕ ಮಂದವಾದ ಬೆಳಕು ಬರುತ್ತಿರುವುದನ್ನು ಕಂಡೆ. ನನ್ನನ್ನು ಕೆಳಗೆ ಒತ್ತಿಹಿಡಿದಿದ್ದ ದೊಡ್ಡ ಮರದ ತೊಲೆಗಳನ್ನು ಎಚ್ಚರಿಕೆಯಿಂದ ಸ್ಪರ್ಶಿಸುತ್ತಾ, ನನ್ನ ಕೈಗಳನ್ನು ಚಲಿಸಲು ಪ್ರಾರಂಭಿಸಿದೆ. ನಾನು ಮೇಲಕ್ಕೆ ಕೈ ಚಾಚಿ ಯಾವುದೋ ನಯವಾದ ವಸ್ತುವನ್ನು ಮುಟ್ಟಿದೆ. ಅದು ನಮ್ಮ ಮನೆಯ ಮಾಳಿಗೆ! ಇಡೀ ಮನೆಯೇ ನನ್ನ ಮೇಲೆ ಕುಸಿದು ಬಿದ್ದಿತ್ತು.

ನಿಧಾನವಾಗಿ ನಾನು ಬೆಳಕಿನ ಕಡೆಗೆ ತೆವಳುತ್ತಾ ಮಾಳಿಗೆಯ ಮೇಲೆ ಬಂದೆ. ಬಿಸಿಯಾದ, ಕಪ್ಪು ಗಾಳಿಯತ್ತ ನೋಡುತ್ತಾ ನಿಂತುಕೊಂಡೆ.

ನನ್ನ ಕಣ್ಣುಗಳನ್ನು ನಂಬಲಾಗಲಿಲ್ಲ. ಏನೂ ಉಳಿದಿರಲಿಲ್ಲ. ಕಿಮಿಯ ಮನೆ ಇಲ್ಲ, ದೇವಾಲಯ ಇಲ್ಲ, ಜನರಿಲ್ಲ, ಹಿರೋಷಿಮಾ ನಗರವೇ ಇಲ್ಲ.

ನಾನು ಜೋರಾಗಿ ಕೂಗಿದೆ, “ಯಾರಾದರೂ ಇದ್ದಾರೆಯೇ?”

“ನಾನು ಇಲ್ಲಿ ಇದ್ದೇನೆ!” ಎಂದು ತಾಯಿ ಕಿರುಚುವುದನ್ನು ಕೇಳಿದೆ, “ನನಗೆ ಸಹಾಯ ಮಾಡು, ನೊಬುವೊ!”

ನಮ್ಮ ಕುಸಿದ ಮನೆಯ ಅವಶೇಷಗಳ ಮೇಲೆ ಎಡವಿ ಬಿದ್ದು, ತಾಯಿ ಅವಶೇಷಗಳನ್ನು ಅಗೆಯುತ್ತಿರುವುದನ್ನು ಕಂಡೆ. ಅಲ್ಲಿ ಶಿನ್ ಇದ್ದನು. ಒಂದು ದೊಡ್ಡ ತೊಲೆಯ ಕೆಳಗೆ ಸಿಕ್ಕಿಹಾಕಿಕೊಂಡಿದ್ದನು.

ತಕ್ಷಣ ನಾನು ತೊಲೆಯನ್ನು ಎತ್ತಿದೆ, ತಾಯಿ ನಿಧಾನವಾಗಿ ಶಿನ್‌ನನ್ನು ಹೊರಗೆಳೆದಳು. ಅವನ ಮುಖದಿಂದ ರಕ್ತ ಸೋರುತ್ತಿತ್ತು. ಮುಖ ಊದಿಕೊಂಡಿತ್ತು. ಮಾತನ್ನು ಕೂಡ ಆಡದಷ್ಟು ಅವನು ತುಂಬಾ ದುರ್ಬಲನಾಗಿದ್ದನು. ಆದರೆ ಅವನ ಕೈಯಲ್ಲಿ ಇನ್ನೂ ಅವನ ಟ್ರೈಸಿಕಲ್‌ದ ಕೆಂಪು ಹ್ಯಾಂಡಲ್ ಇತ್ತು. ಕಿಮಿ ಕಾಣೆಯಾಗಿದ್ದಳು. ಮನೆಯ ಕೆಳಗೆ ಎಲ್ಲಿಯೋ ಮಾಯವಾಗಿದ್ದಳು.

ನಂತರ ಮಾಳಿಗೆಯ ಕೆಳಗೆ ಸಿಕ್ಕಿಹಾಕಿಕೊಂಡಿದ್ದ ಎರಡು ಪುಟ್ಟ ಉಡುಪುಗಳ ಅಂಚುಗಳು ನನ್ನ ಕಣ್ಣಿಗೆ ಬಿದ್ದವು. ಅವುಗಳ ಹಿಂದೆ, ಬೆಂಕಿಯ ಗೋಡೆಯೊಂದು ನಮ್ಮ ಮನೆಯತ್ತ ಧಾವಿಸುತ್ತಿತ್ತು.

"ಮಿಚಿಕೊ! ಯೊಕೊ!" ನಾನು ಕಿರುಚಿದೆ. "ನಾನು ಬರುತ್ತಿದ್ದೇನೆ!"

ನನ್ನ ಎಲ್ಲ ಶಕ್ತಿಯಿಂದ, ತೊಲೆಗಳನ್ನು ಎತ್ತಲು ಪ್ರಯತ್ನಿಸಿದೆ, ಆದರೆ ಸಾಧ್ಯವಾಗಲಿಲ್ಲ. ಈಗ ಬೆಂಕಿ ಬಹಳ ಹತ್ತಿರದಲ್ಲಿತ್ತು. ಅದು ಎಷ್ಟು ಬಿಸಿಯಾಗಿತ್ತೆಂದರೆ ನನ್ನ ಬಟ್ಟೆಗಳು ಸುಟ್ಟು ಹೋಗಲು ಪ್ರಾರಂಭಿಸುತ್ತವೆ ಎಂದು ನನಗೆ ಭಯವಾಯಿತು. ಇದ್ದಕ್ಕಿದ್ದಂತೆ, ಮಿಚಿಕೊ ಮತ್ತು ಯೊಕೊ ಅವರ ಮೇಲಿದ್ದ ತೊಲೆಗಳ ಬೆಂಕಿಯ ಜ್ವಾಲೆಗಳಲ್ಲಿ ಸಿಕ್ಕಿ ಬಿದ್ದರು. ಬೆಂಕಿ ಅವರ ಮೈಯನ್ನೆಲ್ಲ ಸುತ್ತಿಕೊಂಡಿತ್ತು.

"ಮಿಚಿಕೊ! ಯೊಕೊ!" ನಾನು ಭಯಾನಕವಾಗಿ ಅಳುತ್ತಾ ಕೂಗಿದೆ. ನನ್ನ ಹೆಣ್ಣುಮಕ್ಕಳನ್ನು ಉಳಿಸಲು ನಾನು ಅಸಹಾಯಕನಾಗಿದ್ದೆ. ನನಗೆ ಮಾಡಲು ಏನೂ ಇರಲಿಲ್ಲ. ಆದರೆ ಶಿನ್‌ಗೆ ಇನ್ನೂ ಒಂದು ಅವಕಾಶವಿತ್ತು. ಆದ್ದರಿಂದ ತಾಯಿ ಮತ್ತು ನಾನು ಅವನನ್ನು ಎತ್ತಿಕೊಂಡು ಉರಿಯುತ್ತಿದ್ದ ಬೆಂಕಿಯಿಂದ ದೂರವಿರುವ ನದಿಯ ಕಡೆಗೆ ಓಡಿದೆವು.

ಬದುಕಿ ಉಳಿದವರು ನದಿಯ ದಡದಲ್ಲಿ ಸೇರಿದ್ದರು. ಅದು ಭಯಾನಕ ದೃಶ್ಯವಾಗಿತ್ತು.

ಎಲ್ಲರೂ ಸುಟ್ಟುಹೋಗಿದ್ದರು. ಅವರೆಲ್ಲರೂ ನೀರಿಗಾಗಿ ಅಳುತ್ತಾ ನರಳುತ್ತಾ ಕಿರುಚುತ್ತಿದ್ದರು.

"ನೀರು, ನನಗೆ ನೀರು ಬೇಕು," ಎಂದು ಶಿನ್ ಕ್ಷೀಣ ಧ್ವನಿಯಲ್ಲಿ ಬೇಡಿಕೊಂಡನು. ಅವನಿಗೆ ಸಹಾಯ ಮಾಡಬೇಕೆಂಬುದು ನನಗೆ ತುಂಬಾ ಇತ್ತು. ಆದರೆ ಸುತ್ತಮುತ್ತ, ನೀರು ಕುಡಿದಾಗ ಜನರು ಸಾಯುತ್ತಿದ್ದರು. ಆದ್ದರಿಂದ ಅವನಿಗೆ ನೀರು ಕೊಡಲು ನನಗೆ ಧೈರ್ಯವಾಗಲಿಲ್ಲ.

"ಅಪ್ಪಾ," ಶಿನ್ ಎಷ್ಟು ಮೆಲ್ಲಗೆ ಪಿಸುಗುಟ್ಟಿದನೆಂದರೆ ನನಗೆ ಅವನು ಹೇಳಿದ್ದು ಸರಿಯಾಗಿ ಕೇಳಿಸಲಿಲ್ಲ, " ನನ್ನ.....ನನ್ನ ....ಟ್ರೈಸಿಕಲ್___"

ಪ್ಲಾಸ್ಟಿಕ್ ಹಿಡಿಕೆಯನ್ನು ಇನ್ನೂ ಹಿಡಿದಿದ್ದ ಅವನ ಕೈಯನ್ನು ನಾನು ಬಿಗಿಯಾಗಿ ಹಿಡಿದೆ. "ಶಿನ್," ನಾನು ಹೇಳಿದೆ, "ನಿನ್ನ ಕೈಯಲ್ಲಿ ಇನ್ನೂ ಹ್ಯಾಂಡಲ್ ಇದೆ."

ಅವನ ಉಬ್ಬಿಕೊಂಡ ಮುಖವು ಹೊಳೆಯುವಂತೆ ಕಂಡಿತು, ಮತ್ತು ಒಂದು ಸಣ್ಣ ನಗು ಇಣುಕಿತು. ಆದರೆ ಆ ರಾತ್ರಿ ಅವನು ತೀರಿಕೊಂಡನು. ಅವನ ನಾಲ್ಕನೇ ಹುಟ್ಟುಹಬ್ಬಕ್ಕೆ ಹತ್ತು ದಿನಗಳ ಮುನ್ನ ಅವನು ಸಾವನ್ನು ಅಪ್ಪಿದನು.



ಮರುದಿನ, ನಾನು ನಮ್ಮ ಮನೆಗೆ ಹಿಂದಿರುಗಿದೆ. ಅಲ್ಲಿ ಮಿಚಿಕೊ ಮತ್ತು ಯೋಕೊ ಅವರ ಪುಟ್ಟ ಎಲುವುಗಳು ಒಟ್ಟಿಗೆ ಬಿದ್ದಿರುವುದನ್ನು ಕಂಡೆ. ನಾನು ಕಣ್ಣೀರಿಡುತ್ತಾ ಅಳುತ್ತಿದ್ದೆ, "ನನ್ನ ಮುದ್ದಿನ ಮಕ್ಕಳೇ, ನನ್ನನ್ನು ಕ್ಷಮಿಸಿ. ದಯವಿಟ್ಟು ನನ್ನನ್ನು ಕ್ಷಮಿಸಿ."

ಅವರನ್ನು ಹೂತುಹಾಕಿದ ನಂತರ, ಹಿಂದಿನ ದಿನ ಅವರು ಎಷ್ಟು ಸಂತೋಷವಾಗಿದ್ದರು ಎಂಬುದನ್ನು ನೆನಪಿಸಿಕೊಳ್ಳುತ್ತಾ, ನಾನು ಬಹಳ ಹೊತ್ತು ಅಳುತ್ತಿದ್ದೆ.



ಮರುದಿನದ ಸಂಜೆ, ನಾನು ಶಿನ್‌ಗಾಗಿ ನಮ್ಮ ಹಿತ್ತಲಿನಲ್ಲಿ ಒಂದು ಸಮಾಧಿಯನ್ನು ತೋಡುತ್ತಿದ್ದೆ. ಆದರೆ ಅವನನ್ನು ಹೂಳುವ ಮೊದಲು, ಕಿಮಿಯ ತಾಯಿ ಕಿಮಿಯ ಮೃತದೇಹವನ್ನು ಹೊತ್ತುಕೊಂಡು ಬಂದಳು. "ಅವರು ಎಷ್ಟು ಒಳ್ಳೆಯ ಸ್ನೇಹಿತರಾಗಿದ್ದರು," ಎಂದು ಅವಳು ದುಃಖದಿಂದ ಹೇಳಿದಳು. "ನಾವು ಅವರನ್ನು ಒಟ್ಟಿಗೆ ಹೂಳಬೇಕು, ನೋಬುವೋ."

ಆದ್ದರಿಂದ, ಕಿಮಿ ಮತ್ತು ಶಿನ್ ಕೈ ಕೈ ಹಿಡಿದುಕೊಂಡೇ, ಅವಶೇಷಗಳಲ್ಲಿ ನಮಗೆ ಸಿಕ್ಕಿದ್ದ ಶಿನ್‌ನ ಅಚ್ಚುಮೆಚ್ಚಿನ ಟ್ರೈಸಿಕಲ್‌ನೊಂದಿಗೆ ಒಟ್ಟಿಗೆ ಹೂಳಿದೆವು.

ಅದರ ನಂತರ ಪ್ರತಿಯೊಂದು ಸಂಜೆ ನಾವು ನದಿಯ ದಡದಲ್ಲಿ ನಿಂತು ನಮ್ಮ ಮಕ್ಕಳ ಹೆಸರುಗಳನ್ನು ಕೂಗಿ ಅಳುತ್ತಿದ್ದೆವು, "ಶಿನ್! ಮಿಚಿಕೊ! ಯೋಕೊ!"

ಪರಮಾಣು ಬಾಂಬ್ ಹಿರೋಷಿಮಾವನ್ನು ಮರುಭೂಮಿಯನ್ನಾಗಿ ಮಾಡಿದ ನಲವತ್ತು ವರುಷಗಳು ಕಳೆದಿದ್ದವು. ನಗರದ ಸುತ್ತಮುತ್ತೆಲ್ಲ ಹೊಸ ಜೀವ ಚಿಗುರಿತ್ತು. ಮತ್ತೆಂದೂ ಏನೂ ಬೆಳೆಯುವುದಿಲ್ಲ ಎಂದು ಜನರು ಚಿಂತಿಸಿದ್ದರು, ಆದರೆ ಎಲ್ಲೆಡೆ ಮರಗಳು ಮತ್ತು ಹುಲ್ಲು ಮೊಳೆತಿದ್ದವು. ಮಕ್ಕಳು ಉದ್ಯಾನ-ವನಗಳಲ್ಲಿ ನಗುತ್ತಾ ಆಟವಾಡುತ್ತಿದ್ದರು.

ನನ್ನ ಮಕ್ಕಳ ನಗು ನನಗೆ ನೆನಪಾಗುತ್ತಿತ್ತು. ಆ ನೆನಪಿನಿಂದ ನನ್ನ ಹೃದಯ ಇನ್ನಷ್ಟು ನೋಯುತ್ತಿತ್ತು.

ಹಲವು ವರುಷಗಳಿಂದ, ನಮ್ಮ ಮಕ್ಕಳು ಇಷ್ಟು ಹತ್ತಿರದಲ್ಲೇ ಇದ್ದಾರೆ ಎಂಬುದನ್ನು ತಿಳಿದುಕೊಂಡಿದ್ದರಿಂದ ತಾಯಿಗೆ ಮತ್ತು ನನಗೆ ಒಂದಿಷ್ಟು ಸಾಂತ್ವನ ಸಿಗುತ್ತಿತ್ತು.

ಆದರೆ ಮಕ್ಕಳಿಗೆ ಸ್ಮಶಾನದಲ್ಲಿ ಸರಿಯಾದ ಅಂತ್ಯಕ್ರಿಯೆ ಮಾಡಬೇಕೆಂದು ನಾವು ಯಾವಾಗಲೂ ಉದ್ದೇಶಿಸಿದ್ದೆವು. ಒಂದು ದಿನ ಅವರನ್ನು ಸ್ಥಳಾಂತರಿಸುವ ಸಮಯ ಬಂದಿದೆ ಎಂದು ನಾವು ನಿರ್ಧರಿಸಿದೆವು. ನಾವು ಹಿತ್ತಲಿನಲ್ಲಿ ಅಗೆಯಲು ಪ್ರಾರಂಭಿಸಿದೆವು, ಮತ್ತು ಕಿಮಿಯ ತಾಯಿ ನಮ್ಮೊಂದಿಗೆ ಸೇರಿಕೊಂಡಳು.

“ನೋಡು ಅಮ್ಮ, ಇದು ಟ್ರೈಸಿಕಲ್! ಇದು ಇಲ್ಲಿದೆ ಎಂಬುದನ್ನು ನಾನು ಮರೆತಿದ್ದೆ.”

ನನಗೆ ಅರಿವಾಗುವಷ್ಟರಲ್ಲಿ, ನಾನು ಅಳುತ್ತಿದ್ದೆ. ನಾನು ಮುಖವನ್ನು ಬೇರೆ ಕಡೆ ತಿರುಗಿಸಬೇಕಾಯಿತು. ನನಗೆ ಅದನ್ನು ನೋಡಲು ಸಾಧ್ಯವಾಗಲೇ ಇಲ್ಲ.

“ನೋಡು ಪಾಪಾ, ಅಲ್ಲಿ ಏನೋ ಬಿಳಿಯಾಗಿ ಕಾಣುತ್ತಿದೆ,” ಎಂದು ಅಮ್ಮ ಹೇಳಿದರು.

ನಾವು ಎಲ್ಲರೂ ಕಿಮಿ ಮತ್ತು ಶಿನ್ ಅವರ ಪುಟ್ಟ ಬಿಳಿ ಎಲುವುಗಳನ್ನು ನೋಡುತ್ತಾ ನಿಂತೆವು. ನಾವು ಅವುಗಳನ್ನು ಹೇಗೆ ಕೈ ಕೈ ಹಿಡಿದಂತೆ ಇಟ್ಟಿದ್ದೆವೋ ಹಾಗೆಯೇ ಅವರ ಅಸ್ಥಿಪಂಜರಗಳಿದ್ದವು.

ಯುದ್ಧಗಳು ಯಾವಾಗಲೂ ಕ್ರೂರವಾಗಿರುತ್ತವೆ. ಅದನ್ನು ಯಾರು ಪ್ರಾರಂಭಿಸಿದರೂ ಪರವಾಗಿಲ್ಲ. ನಿರಪರಾಧಿ ಜನರು ಸಾಯುತ್ತಾರೆ. ಶಿನ್‌ನಂತಹ ಮಕ್ಕಳೂ ಸಹ ಸಾಯುತ್ತಾರೆ.

ನನ್ನ ಕಣ್ಣುಗಳಲ್ಲಿಯ ಕಣ್ಣೀರಿನೊಂದಿಗೆ, ನಾನು ಶಿನ್‌ನ ಟ್ರೈಸಿಕಲ್ ಮೆಲ್ಲಗೆ ಎತ್ತಿಕೊಂಡೆ. 'ಇಂತಹ ಅಂತ್ಯಕಾಲ ಯಾವ ಮಕ್ಕಳಿಗೂ ಎಂದಿಗೂ ಬರಬಾರದು. ಸಾಕಷ್ಟು ಜನರು ಶಿನ್‌ನ ಟ್ರೈಸಿಕಲ್ ನೋಡಿ ಮಕ್ಕಳೆಲ್ಲ ಆಟವಾಡುತ್ತ ನಗುತ್ತ ಶಾಂತಿಯುತವಾಗಿ ಇರಬಹುದಾದ ಜಗತ್ತು ಇರಲಿ ಎಂಬುದನ್ನು ಅವರು ಮನಗಾಣಬೇಕು. ' ಎಂದು ನನಗೆ ಅನ್ನಿಸಿತು.

ಮರುದಿನ ನಾನು ಆ ಟ್ರೈಸಿಕಲ್ ಹಿರೋಷಿಮಾದ ಶಾಂತಿ ವಸ್ತುಸಂಗ್ರಹಾಲಯಕ್ಕೆ ತೆಗೆದುಕೊಂಡು ಹೋದೆ. ಈಗ ಶಿನ್‌ನ ಕಥೆ ಪ್ರಪಂಚದಾದ್ಯಂತದಲ್ಲಿಯ ಮಕ್ಕಳಿಗಾಗಿ ಶಾಂತಿಯ ಕನಸನ್ನು ಜೀವಂತವಾಗಿಡಲು ಸಹಾಯ ಮಾಡುತ್ತಲಿದೆ.